ಕರ್ನಾಟಕ ರಾಜ್ಯ ವಕ್ಫ್ ಮಂಡಳಿ
I.No. 118
29 APR 2022

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ರಾಜ್ಯದ 14 ಜಿಲ್ಲೆಗಳ 44 ವಕ್ಫ್ ಸಂಸ್ಥೆಗಳ ದುರಸ್ಥಿ ಮತ್ತು ಜೀರ್ಣೋದ್ಧಾರಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :** 1) ಸರ್ಕಾರಿ ಆದೇಶ ಸಂಖ್ಯೆ: **RD 139 CWP 1977** ದಿನಾಂಕ:23-08-1979 & **MWD 147 WES 2019** ದಿನಾಂಕ:05-02-2020

2) ಸರ್ಕಾರಿ ಆದೇಶ ಸಂಖ್ಯೆ:**MWD 33 WES 2022**, ದಿನಾಂಕ:11.04.2022,

## ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿನ ವಕ್ಫ್ ಸಂಸ್ಥೆಗಳಿಗೆ Grant-in Aid Code ಅನ್ನು ಆಗಸ್ಟ್ 1979 ಹಾಗೂ ಫೆಬ್ರವರಿ 2020 ರಲ್ಲಿ ಜಾರಿಗೊಳಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ವಕ್ಫ್ ಸಂಸ್ಥೆಗಳ ಜೀರ್ಣೋದ್ಧಾರ ಹಾಗೂ ದುರಸ್ಥಿಗಾಗಿ 2022-23ನೇ ಸಾಲಿನ ಲೆಕ್ಕಶೀರ್ಷಿಕೆ: 2225-04-800-0-04(015) ರಡಿಯಲ್ಲಿ ರೂ.1000.00ಲಕ್ಷಗಳ ಅನುದಾನವನ್ನು ವಕ್ಫ್ ಸಂಸ್ಥೆಗಳ ದುರಸ್ಥಿ ಮತ್ತು ಜೀರ್ಣೋದ್ಧಾರಕ್ಕಾಗಿ ಹಂಚಿಕೆ ಮಾಡಲಾಗಿರುತ್ತದೆ.

ರಾಜ್ಯದ 14 ಜಿಲ್ಲೆಗಳ 44 ವಕ್ಫ್ ಸಂಸ್ಥೆಗಳ ದುರಸ್ಥಿ ಹಾಗೂ ಜೀರ್ಣೋದ್ಧಾರಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: MWD 08 WGA 2022 ,
## ಬೆಂಗಳೂರು, ದಿನಾಂಕ:29.04.2022

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2022-23 ನೇ ಸಾಲಿನ ಲೆಕ್ಕಶೀರ್ಷಿಕೆ: 2225-04-800-0-04(015) ರಡಿಯಲ್ಲಿ ರೂ.1000.00 ಲಕ್ಷಗಳ ಅನುದಾನವನ್ನು ಮರು ಹಂಚಿಕೆ ಮಾಡಿರುವ ಅನುದಾನದಲ್ಲಿ ರೂ.500.00 ಲಕ್ಷಗಳ ಅನುದಾನವನ್ನು ರಾಜ್ಯದ 14 ಜಿಲ್ಲೆಗಳ 44 ವಕ್ಫ್ ಸಂಸ್ಥೆಗಳ ದುರಸ್ಥಿ ಮತ್ತು ಜೀರ್ಣೋದ್ಧಾರಕ್ಕಾಗಿ ಮಂಜೂರು ಮಾಡಿ ಅನುಬಂಧದಲ್ಲಿನ ಸಂಸ್ಥೆಗಳ ಎದುರಿಗೆ ಸೂಚಿಸಲಾಗಿರುವ ಪ್ರತ್ಯೇಕ ಮೊತ್ತವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

## ಷರತ್ತುಗಳು:

1. ಈ ವೆಚ್ಚವನ್ನು 2022-23ನೇ ಸಾಲಿನ ಲೆಕ್ಕ ಶೀರ್ಷಿಕೆ 2225-04-800-0-04(015) ರಡಿಯಲ್ಲಿ ವಕ್ಫ್ ಸಂಸ್ಥೆಗಳ ದುರಸ್ಥಿ ಮತ್ತು ಜೀರ್ಣೋದ್ಧಾರಕ್ಕಾಗಿ ಮರುಹಂಚಿಕೆ ಮಾಡಲಾದ ಅನುದಾನದ ಅಡಿಯಲ್ಲಿ ಭರಿಸತಕ್ಕದ್ದು.

2. ಮೇಲೆ ಓದಲಾದ (1)ರ ಆದೇಶದಂತೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು Grant-in-Aid ನಲ್ಲಿರುವ ಸೂಚನೆಗಳನ್ನು ವಕ್ಫ್ ಸಂಸ್ಥೆಗಳಿಗೆ ಹಣ ಬಿಡುಗಡೆಗೊಳಿಸುವ ಮುನ್ನ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

.........2

4. ರೂ.5.00 ಲಕ್ಷಕ್ಕಿಂತ ಹೆಚ್ಚು ಅನುದಾನ ಮಂಜೂರು ಮಾಡಲಾಗಿರುವ ವಕ್ಫ್ ಸಂಸ್ಥೆಗಳಿಗೆ ಮೊದಲನೇ ಕಂತಿನ ರೂ.5.00 ಲಕ್ಷಗಳನ್ನು ಪ್ರಥಮ ಕಂತಿನಲ್ಲಿ ಬಿಡುಗಡೆ ಮಾಡಿ ಇನ್ನುಳಿದ ಮೊತ್ತವನ್ನು ಎರಡನೇ ಕಂತಿನಲ್ಲಿ ಬಿಡುಗಡೆ ಮಾಡತಕ್ಕದ್ದು. 2ನೇ ಕಂತಿನ ಅನುದಾನ ಬಿಡುಗಡೆ ಮಾಡುವ ಮೊದಲು ಕಾಮಗಾರಿಯ ಪ್ರಗತಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ಪ್ರಗತಿಯಾದಲ್ಲಿ ಹಣ ಬಳಕೆ ಪ್ರಮಾಣ ಪತ್ರ ಪಡೆದ ನಂತರ ಮಾತ್ರ ಅನುದಾನ ಬಿಡುಗಡೆ ಮಾಡತಕ್ಕದ್ದು.
5. ರೂ.5.00ಲಕ್ಷಕ್ಕಿಂತ ಕಡಿಮೆ ಅನುದಾನ ಮಂಜೂರಾಗಿರುವ ವಕ್ಫ್ ಸಂಸ್ಥೆಗಳಿಗೆ ಅನುದಾನವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡತಕ್ಕದ್ದು.
6. ಸದರಿ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆಗೊಳಿಸಲಾಗಿದೆಯೋ ಆ ಉದ್ದೇಶಕ್ಕಾಗಿ ಬಳಕೆಯಾಗಿರುವ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಸಂಸ್ಥೆಗಳು ಕಡ್ಡಾಯವಾಗಿ ಕಳುಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2022, ದಿನಾಂಕ:04.04.2022 ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

Mukthar Pasha H.G
(ಮುಕ್ತಾರ್ ಪಾಷ ಹೆಚ್.ಜಿ) 29.4.2022
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು
ವಕ್ಫ್ ಇಲಾಖೆ.

ಗೆ:

1) ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು
2) ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ) ವಿಧಾನ ಸೌಧ, ಬೆಂಗಳೂರು.
3) ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
4) ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
5) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು.
6) ಅಧ್ಯಕ್ಷರು/ವಕ್ಫ್ ಅಧಿಕಾರಿಗಳು, ಜಿಲ್ಲಾ ವಕ್ಫ್ ಸಲಹಾ ಸಮಿತಿ, ಮೈಸೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ವಿಜಯಪುರ, ಹಾಸನ, ಬೆಂಗಳೂರು ನಗರ, ಕೊಡಗು, ಚಿತ್ರದುರ್ಗ, ಬೆಂಗಳೂರು ಗ್ರಾಂ, ಬಳ್ಳಾರಿ, ಶಿವಮೊಗ್ಗ, ಚಿಕ್ಕಮಗಳೂರು, ರಾಯಚೂರು, ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು.
7) ಸಮನ್ವಯ ಅಧಿಕಾರಿ, ಅಲ್ಪಸಂಖ್ಯಾತರ ಸಹಾಯವಾಣಿ ಕೇಂದ್ರ,(24x7) ವಸಂತನಗರ ಬೆಂಗಳೂರು.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

~~~~~~*****~~~~~~
~~~~~~

**ಸರ್ಕಾರದ ಆದೇಶ ಸಂಖ್ಯೆ: MWD 08 WGA 2022, ದಿನಾಂಕ:29.04.2022 ಕ್ಕೆ**

**ಅನುಬಂಧ**

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | ಉದ್ದೇಶಿತ ಕಾಮಗಾರಿ | ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|
| | **ಮೈಸೂರು ಜಿಲ್ಲೆ** | | |
| 1 | ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲೂಕು, ಹೊಸಗ್ರಹಾರ ಹೋಬಳ, ಹಂಪಾಪುರ ಗ್ರಾಮದಲ್ಲಿರುವ ಸ್ಮಶಾನ (ಈದ್ಗಾ ಮೈದಾನ) | ದುರಸ್ಥಿ ಮತ್ತು ಜೀರ್ಣೋದ್ಧಾರ ಕಾಮಗಾರಿ | 05.00 |
| 2 | ಮೈಸೂರು ಜಿಲ್ಲೆ, ಕೆ.ಆರ್. ನಗರ ತಾಲೂಕು, ಮಿರ್ಲೆ ಹೋಬಳ, ಸ್ಯಾಬಾಳು ಗ್ರಾಮದಲ್ಲಿರುವ ಮಸೀದಿ | ದುರಸ್ಥಿ ಮತ್ತು ಜೀರ್ಣೋದ್ಧಾರ ಕಾಮಗಾರಿ | 05.00 |
| 3 | ಮೈಸೂರು ಜಿಲ್ಲೆ, ಕೆ.ಆರ್. ನಗರ ತಾಲೂಕು, ಹೊಸಅಗ್ರಹಾರ ಹೋಬಳ, ಚಿಕ್ಕವಡ್ಡರಗುಡಿ ಗ್ರಾಮದಲ್ಲಿರುವ ಮಸೀದಿ | ದುರಸ್ಥಿ ಮತ್ತು ಜೀರ್ಣೋದ್ಧಾರ ಕಾಮಗಾರಿ | 05.00 |
| 4 | ಜಾಮಿಯಾ ಮಸ್ಜಿದ್ ಬೇರಿಯಾ, ಕೆ.ಆರ್. ನಗರ ತಾಲ್ಲೂಕು, ಮೈಸೂರು ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋದ್ಧಾರ ಕಾಮಗಾರಿ | 10.00 |
| 5 | ಜಾಮಿಯಾ ಮಸ್ಜಿದ್ ಅರೇಬಿಕ್ ಮದರಸಾ ಸಾಟಗ್ರಾಮ, ಕೆ.ಆರ್. ನಗರ ತಾಲ್ಲೂಕು, ಮೈಸೂರು ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋದ್ಧಾರ ಕಾಮಗಾರಿ | 10.00 |
| | **ಹುಬ್ಬಳ್ಳಿ-ಧಾರವಾಡ ಜಿಲ್ಲೆ** | | |
| 6 | ಅಹಲೆ ಸುನ್ನತ್-ಉಲ್ ಜಮಾತ್, ಸೋನಿಯಾ ಗಾಂಧಿ ನಗರ (ಆಶ್ರಯ ಪ್ಲಾಟ್) ಬಿದನಾಳ, ಹುಬ್ಬಳ್ಳಿ ಧಾರವಾಡ ಜಿಲ್ಲೆ | ದುರಸ್ಥಿ ಮತ್ತು ಜೀರ್ಣೋದ್ಧಾರ ಕಾಮಗಾರಿ | 20.00 |
| | **ಬೆಳಗಾವಿ ಜಿಲ್ಲೆ** | | |
| 7 | ಜಾಮೇ ಮಸ್ಜಿದ್-ಕಿಲ್ಲಾ ಮೊಹಲ್ಲಾ, ನಿಪ್ಪಾಣಿ ನಗರ, ನಿಪ್ಪಾಣಿ ತಾಲೂಕು, ಬೆಳಗಾವಿ ಜಿಲ್ಲೆ | ದುರಸ್ಥಿ ಮತ್ತು ಜೀರ್ಣೋದ್ಧಾರ ಕಾಮಗಾರಿ | 20.00 |
| 8 | ಜಮಾತುಲ್ ಮುಸ್ಲೀಮಿನ್ ಬಾಗಬಾನ್ ಮೊಹಲ್ಲಾ, ಬಾಗಬಾನ್ ಗಲ್ಲಿ, ನಿಪ್ಪಾಣಿ ನಗರ, ನಿಪ್ಪಾಣಿ ತಾಲೂಕು, ಬೆಳಗಾವಿ ಜಿಲ್ಲೆ | ದುರಸ್ಥಿ ಮತ್ತು ಜೀರ್ಣೋದ್ಧಾರ ಕಾಮಗಾರಿ | 25.00 |
| 9 | ಮುಸ್ಲಿಂ ಜಮಾತ್, ಬೊರಗಾಂವ ಗ್ರಾಮ, ಚಿಕ್ಕೋಡಿ ತಾಲೂಕು, ಬೆಳಗಾವಿ ಜಿಲ್ಲೆ | ದುರಸ್ಥಿ ಮತ್ತು ಜೀರ್ಣೋದ್ಧಾರ ಕಾಮಗಾರಿ | 25.00 |
| 10 | ಬೆಳಗಾವಿ ಜಿಲ್ಲೆ, ಅಥಣಿ ತಾಲೂಕು, ಮೊಲ್ವಾಡ್ ಗ್ರಾಮದಲ್ಲಿರುವ ಮಸೀದಿ ಮತ್ತು ಖಬರ್‌ಸ್ತಾನ್ | ದುರಸ್ಥಿ ಮತ್ತು ಜೀರ್ಣೋದ್ಧಾರ ಕಾಮಗಾರಿ | 10.00 |

**ಸರ್ಕಾರದ ಆದೇಶ ಸಂಖ್ಯೆ: MWD 08 WGA 2022, ದಿನಾಂಕ:29.04.2022 ಕ್ಕೆ**

(ರೂ.ಲಕ್ಷಗಳಲ್ಲಿ)

| | | | |
|---|---|---|---|
| 11 | ಪಿರ್ ಮ್ಮಮುಲಾಲ ಬಾಬಾ ದರ್ಗಾ, ಉಗಾರ ಬುದ್ರುಕ ಗ್ರಾಮ, ಕಾಗವಾಡ ತಾಲೂಕು, ಬೆಳಗಾವಿ ಜಿಲ್ಲೆ | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |
| 12 | ಜಿಡ್ಡಿ ಓಣಿ ಮಸ್ಜಿದ್, ಮುನವಳ್ಳಿ ಗ್ರಾಮ, ಸವದತ್ತಿ ತಾಲೂಕು, ಬೆಳಗಾವಿ ಜಿಲ್ಲೆ | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 05.00 |
| 13 | ಹಜರತ್ ಬಾಹುದ್ದೀನ್ ಇಸ್ಲಾಮ್ ಮಸ್ಜೀದ್ ಮತ್ತು ಕಬರ್‌ಸ್ತಾನ್ ಕಮಿಟಿ, ಸಿದ್ದಾಪೂರ, ರಾಯಬಾಗ ತಾಲೂಕು, ಬೆಳಗಾವಿ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 05.00 |
| 14 | ಸುನತ್ ಮುಸ್ಲಿಂ ಜಮಾತ್ ಕಮಿಟಿ, ಸ.ನಂ. 28, ಕೋಥಳ ಗ್ರಾಮ, ಚಿಕ್ಕೋಡಿ ತಾಲೂಕು, ಬೆಳಗಾವಿ ಜಿಲ್ಲೆ | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |
| 15 | ಸುನತ್ ಮುಸ್ಲಿಂ ಜಮಾತ್ ಕಮಿಟಿ, ಸ.ನಂ. 1156, ಕೋಥಳ ಗ್ರಾಮ, ಚಿಕ್ಕೋಡಿ ತಾಲೂಕು, ಬೆಳಗಾವಿ ಜಿಲ್ಲೆ | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |
| **ವಿಜಯಪುರ ಜಿಲ್ಲೆ** | | | |
| 16 | ಸೈಯದ್ ಜಲಾಲ್ ಬುಕಾರಿ ದರ್ಗಾ, ಆಹೇರಸಂಗ ಗ್ರಾಮ, ಇಂಡಿ ತಾ, ವಿಜಯಪುರ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |
| 17 | ಜಾಮಿಯಾ ಮಸೀದಿ, ದಿಂಡವಾರ ಗ್ರಾಮ, ಬಸವನಬಾಗೇವಾಡಿ ತಾ ವಿಜಯಪುರ ಜಿಲ್ಲೆ | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |
| 18 | ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಎಜುಕೇಷನ್ ಮತ್ತು ರೂರಲ್ ಡೆವಲಪ್‌ಮೆಂಟ್ ಇನ್‌ಸ್ಟಿಟ್ಯೂಟ್, ಕಾಖಂಡಕಿ ಗ್ರಾಮ, ಬಬಲೇಶ್ವರ ತಾ. ವಿಜಯಪುರ ಜಿಲ್ಲೆ | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 20.00 |
| 19 | ಮುಜಾವರ ಮಸೀದಿ, ಕಕ್ಕಳಮೇಳ ಗ್ರಾಮ, ಸಿಂದಗಿ ತಾ, ವಿಜಯಪುರ ಜಿಲ್ಲೆ | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |
| **ಹಾಸನ ಜಿಲ್ಲೆ** | | | |
| 20 | ಹಾಸನ ಜಿಲ್ಲೆ ಸಕಲೇಶಪುರ ಆಝಾದ್ ನಗರದ ಬದ್ರಿಯಾ ಜುಮ್ಮಾ ಮಸೀದಿ | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 20.00 |
| 21 | ಬದ್ರಿಯಾ ಜುಮ್ಮಾ ಮಸ್ಜಿದ್, ಪಂಪ್ ಹೌಸ್ ರೋಡ್, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |
| 22 | ಸುನ್ನಿ ನೂರಾನಿ ಮಸ್ಜಿದ್, ಜೆ.ಪಿ.ನಗರ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |

**ಸರ್ಕಾರದ ಆದೇಶ ಸಂಖ್ಯೆ: MWD 08 WGA 2022, ದಿನಾಂಕ:29.04.2022 ಕ್ಕೆ**

(ರೂ.ಲಕ್ಷಗಳಲ್ಲಿ)

| | | | |
|---|---|---|---|
| **ಬೆಂಗಳೂರು ನಗರ ಜಿಲ್ಲೆ** | | | |
| 23 | ವಡೇರಹಳ್ಳಿ ಗ್ರಾಮ ಸರ್ವೆ ನಂ.36 ರಲ್ಲಿರುವ ತಾಹ ಖಬ್ರಸ್ತಾನ್, ವಡೇಹರಹಳ್ಳಿ ಗ್ರಾಮ, ಯಲಹಂಕ ತಾಲೂಕು, ಬೆಂಗಳೂರು. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 20.00 |
| **ಕೊಡಗು ಜಿಲ್ಲೆ** | | | |
| 24 | ಕಿಜರ್ ಜುಮ್ಮಾ ಮಸ್ಜೀದ್, ಮೆಕೇರಿ ಗ್ರಾಮ, ಕಗ್ಗೋಡ್ಲು ಅಂಚೆ, ಮಡಿಕೇರಿ ತಾ, ಕೊಡಗು ಜಿಲ್ಲೆ. | ಅಭಿವೃದ್ಧಿ ಕಾಮಗಾರಿ | 10.00 |
| 25 | ನೂರುಲ್ ಇಸ್ಲಾಂ ಮಸೀದಿ ನೆಹರು ನಗರ, ವಿರಾಜಪೇಟೆ, ಕೊಡಗು ಜಿಲ್ಲೆ | ದುರಸ್ಥಿ ಮತ್ತು ಜೀಣೋದ್ಧಾರ ಕಾಮಗಾರಿ | 10.00 |
| 26 | ಮೊಹಿಯುದ್ದೀನ್ ಜುಮ್ಮಾ ಮಸೀದಿ, ಚೇರಂಬಾನಿ, ಮಡಿಕೇರಿ | ದುರಸ್ಥಿ ಮತ್ತು ಜೀಣೋಧ್ಧಾರ ಕಾಮಗಾರಿ | 10.00 |
| 27 | ಮಸ್ಜಿದುಲ್ ಖಿಲರಿಯಾ ಕುಂದಡ್ಕ, ಕುಂಜಿಲ ಕಕ್ಕಬ್ಬೆ ಪೋಸ್ಟ್, ಮಡಿಕೇರಿ ಕೊಡಗು ಜಿಲ್ಲೆ | ದುರಸ್ಥಿ ಮತ್ತು ಜೀಣೋಧ್ಧಾರ ಕಾಮಗಾರಿ | 10.00 |
| **ಚಿತ್ರದುರ್ಗ ಜಿಲ್ಲೆ** | | | |
| 28 | ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲೂಕು ಚಿಕ್ಕಜಾಜೂರು ಗ್ರಾಮದ ಮಸೀದಿ | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 25.00 |
| **ಬೆಂಗಳೂರು ಗ್ರಾಮಾಂತರ ಜಿಲ್ಲೆ** | | | |
| 29 | ಮಸ್ಜಿದ್-ಎ-ಖಿಜರ್, ಗಿದ್ದಪ್ಪನಹಳ್ಳಿ ಸೂಲಿಬೆಲೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |
| **ಬಳ್ಳಾರಿ ಜಿಲ್ಲೆ** | | | |
| 30 | ದರ್ಗಾ ಹಜರತ್ ಶಮೀರ್ ಪೀರ್ ಬಾಬಾ ಕಮಿಟಿ (ಸುನ್ನಿ), ಮಾದಲಘಟ್ಟ ರೋಡ್, 2ನೇ ವಾರ್ಡ್, ಹೂವಿನಹಡಗಲಿ ಪಟ್ಟಣ ಮತ್ತು ತಾಲ್ಲೂಕು, ಬಳ್ಳಾರಿ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 7.50 |
| 31 | ಹಜರತ್ ಬಿಲಾಲ್ ದರ್ಗಾ ಮಸ್ಜಿದ್ (ಸುನ್ನಿ), ಗೌಸಿಯಾ ನಗರ, 15ನೇ ವಾರ್ಡ್, ರಾಮಸ್ವಾಮಿ ಪ್ಲಾಟ್, ಹೂವಿನಹಡಗಲಿ ಪಟ್ಟಣ ಮತ್ತು ತಾಲ್ಲೂಕು, ಬಳ್ಳಾರಿ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |

ಸರ್ಕಾರದ ಆದೇಶ ಸಂಖ್ಯೆ: MWD 08 WGA 2022, ದಿನಾಂಕ:29.04.2022 ಕ್ಕೆ

(ರೂ.ಲಕ್ಷಗಳಲ್ಲಿ)

| | | | |
|---|---|---|---|
| 32 | ಖದೀಮ್ ಜಾಮಿಯಾ ಮಸ್ಜಿದ್ (ಸುನ್ನಿ), ಹೂವಿನಹಡಗಲಿ ಪಟ್ಟಣ ಮತ್ತು ತಾಲ್ಲೂಕು, ಬಳ್ಳಾರಿ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 7.50 |
| 33 | ಜುಮ್ಮಾ ಮಸ್ಜಿದ್, ಹಿರೇಕೊಳಚಿ ಗ್ರಾಮ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |
| **ಶಿವಮೊಗ್ಗ ಜಿಲ್ಲೆ** | | | |
| 34 | ಜಾಮಿಯಾ ಮಸ್ಜಿದ್ ಅನವೇರಿ ಗ್ರಾಮ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 8.00 |
| 35 | ಇತ್ತೆಹಾದುಲ್ ಮುಸ್ಲಿಮೀನ್ ಜಾಮಿಯಾ ಮಸ್ಜಿದ್, ಹೊಸೂರ್ ಸಿದ್ದಾಪುರ ಗ್ರಾಮ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 8.00 |
| 36 | ಜಾಮಿಯಾ ಮಸ್ಜಿದ್ ಬೆಳಗಾವಿ ಗ್ರಾಮ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 8.00 |
| **ಚಿಕ್ಕಮಗಳೂರು** | | | |
| 37 | ಸಲ್ಮಾನುಲ್ ಫಾರಸಿ ಮದರಸ ಮತ್ತು ಮಸ್ಜಿದ್, ಆದಿಶಕ್ತಿ ನಗರ, ರಾಂಪುರ ಚಿಕ್ಕಮಗಳೂರು ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |
| 38 | ಹಜರತ್ ಸೈಯದ್ ಬೂದ್ ಅಲಿ ಷಾ ಮತ್ತು ಕರಮ್ ಅಲಿ ಷಾ ವಸ್ತಾರೆ, ಅಲ್ದೂರ್ ಹೋಬಳಿ, ಚಿಕ್ಕಮಗಳೂರು ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 8.00 |
| 39 | ಮಸ್ಜಿದ್-ಎ-ಇಲಾಹಿ, ದಂತರಮಕ್ಕಿ ಚಿಕ್ಕಮಗಳೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 8.00 |
| **ರಾಯಚೂರು ಜಿಲ್ಲೆ** | | | |
| 40 | ಮಸ್ಜಿದ್-ಎ-ಸಫಿಯಾ ಅಹ್ಲೆ ಸುನ್ನತ್ ಜಮಾತ್, ಅರಿಷಿಣಗಿ ಗ್ರಾಮ, ರಾಯಚೂರು ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |
| **ದಕ್ಷಿಣ ಕನ್ನಡ ಜಿಲ್ಲೆ** | | | |
| 41 | ಬದರುಲ್ ಹುದಾ ಎಜುಕೇಷನಲ್ ಸೆಂಟರ್, ಬದರುಲ್ ಹುದಾ ಸುನ್ನಿ ಜುಮ್ಮಾ ಮಸ್ಜಿದ್ ಮತ್ತು ಬದರುಲ್ ಹುದಾ ಅರೇಬಿಕ್ ಮದರಸಾ, ನಾಟೆಕಲ್ ಸಾಲೆತ್ತೂರು, ಬಂಟ್ವಾಳ ತಾಲ್ಲೂಕು, ದಕ್ಷಿಣಕನ್ನಡ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |

ಸರ್ಕಾರದ ಆದೇಶ ಸಂಖ್ಯೆ: MWD 08 WGA 2022, ದಿನಾಂಕ:29.04.2022 ಕ್ಕೆ

(ರೂ.ಲಕ್ಷಗಳಲ್ಲಿ)

| | | | |
|---|---|---|---|
| 42 | ತಕ್ವಾ ಜುಮ್ಮಾ ಮಸ್ಜಿದ್, ಕುಡ್ತಮುಗೇರು, ಕೊಳ್ನಾಡು ಮಂಚಿ ಬಂಟ್ವಾಳ ತಾಲ್ಲೂಕು, ದಕ್ಷಿಣಕನ್ನಡ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 5.00 |
| 43 | ನೂರುಲ್ ಇಸ್ಲಾಂ ಸುನ್ನಿ ಚಾರಿಟೇಬಲ್ ಸಂಘ, ಮುದ್ರಾಜೆ ಬೀಟಿಗೆ, ಕೆದಿಲ ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 10.00 |
| 44 | ಮಸ್ಜಿದ್ ಅಲ್ ಯೂಸುಫ್ ಮತ್ತು ಜಾಮಿಯಾ ತಮೀಮ್ ಮದರಸಾ ಎಜ್ಯುಕೇಷನ್, ಅನುಗ್ರಹ ಎಜ್ಯುಕೇಷನಲ್ ಸೋಷಿಯಲ್ ವೆಲ್‌ಫೇರ್ ಟ್ರಸ್ಟ್, ಬೆಳ್ತಂಗಡಿ ತಾಲ್ಲೂಕು, ದಕ್ಷಿಣಕನ್ನಡ ಜಿಲ್ಲೆ. | ದುರಸ್ಥಿ ಮತ್ತು ಜೀರ್ಣೋಧ್ಧಾರ ಕಾಮಗಾರಿ | 20.00 |
| | | ಒಟ್ಟು | 500.00 |

(ಐದು ಕೋಟಿ ರೂಪಾಯಿಗಳು ಮಾತ್ರ)

Mukthar Pasha. H.G. 29/4/2022

(ಮುಕ್ತಾರ್ ಪಾಷ ಹೆಚ್.ಜಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು

ವಕ್ಫ್ ಇಲಾಖೆ.